ಕೇಶವರೆಡ್ಡಿ ಹಂದ್ರಾಳ

# ಇನ್ನಾದರೂ ಸಾಯಬೇಕು

ಗುಹೆಯೊಂದರ ಆಳದಿಂದ ಪ್ರಾಣಿಯೊಂದು ಕೂಗಿದಂತಾಗಿ ಪ್ರೊಫೆಸರ್ ಋಗ್ವೇದಿಯವರಿಗೆ ಎಚ್ಚರವಾದಾಗ ರಾತ್ರಿ ಒಂದೂಕಾಲು ಗಂಟೆಯಾಗಿತ್ತು. ಮಂಚದ ಪಕ್ಕದ ಸೋಫಾದ ಮೇಲೆ ಇಟ್ಟಿದ್ದ ಫೋನ್ ರಿಂಗಾಗುತ್ತಿತ್ತು. ನಿದ್ದೆಯ ಮತ್ತಿನಲ್ಲಿ ಪ್ರಾಣಿಯ ಕೂಗಿನಂತೆ ಕೇಳಿಸುತ್ತಿದ್ದ ಸದ್ದು ಫೋನಿನದೆಂದು ತಿಳಿದ ಪ್ರೊಫೆಸರ್ ಸಮಾಧಾನ ಪಟ್ಟುಕೊಂಡರು. ಅವರು ಮಾಮೂಲಿಯಾಗಿ ಪ್ರತಿನಿತ್ಯ ಮಲಗುತ್ತಿದ್ದದ್ದು ರಾತ್ರಿ ಒಂದೂವರೆ ಗಂಟೆಗೇನೆ. ಆರು ವರ್ಷಗಳ ಹಿಂದೆಯೇ ನಿವೃತ್ತರಾಗಿದ್ದ ಋಗ್ವೇದಿ ದೊಡ್ಡ ಮನೆಯಲ್ಲಿ ಸದ್ಯಕ್ಕೆ ಒಬ್ಬರೇ ಇರುವುದು. ಸೇವೆಯ ಕೊನೆಯ ವರ್ಷದಲ್ಲಿರುವಾಗಲೇ ಹೆಂಡತಿ ಪರಲೋಕವಾಸಿಯಾಗಿದ್ದಳು. ಮಕ್ಕಳಿಬ್ಬರೂ ಅಮೆರಿಕದಲ್ಲಿ ಸೆಟ್ಲಾಗಿಬಿಟ್ಟಿದ್ದರು. ದೊಡ್ಡವನು ಡಾಕ್ಟರ್, ಚಿಕ್ಕವನು ಸಾಫ್ಟ್‌ವೇರ್ ಎಂಜಿನಿಯರ್. ಇಬ್ಬರಿಗೂ ಇಬ್ಬಿಬ್ಬರು ಮಕ್ಕಳಿದ್ದು ಅವರು ಅಮೆರಿಕದ ನಾಗರಿಕರೇ ಆಗಿದ್ದಾರೆ. ಋಗ್ವೇದಿಯ ಮೊದಲ ಮಗನ ಹೆಂಡತಿ ಪಂಜಾಬಿಯಾದರೆ, ಎರಡನೆ ಮಗನ ಹೆಂಡತಿ ಪಠಾಣ್ ಸಮುದಾಯಕ್ಕೆ ಸೇರಿದವಳು. ಹಾಗಾಗಿ ಇಬ್ಬರು ಸೊಸೆಯರೂ ಬಣ್ಣ ಮತ್ತು ಬ್ಯೂಟಿಯಲ್ಲಿ ಅಮೆರಿಕನ್ ಮಹಿಳೆಯರನ್ನು ಮೀರಿಸುವಂತಿದ್ದಾರೆ. ಅವರ ಇಂಗ್ಲಿಷ್ ಆಕ್ಸೆಂಟ್ ಕೂಡಾ ಅಷ್ಟೆ, ಮಾತುಗಳನ್ನು ಕೇಳಿದರೆ ಅವರನ್ನು ಯಾರೂ ಇಂಡಿಯನ್ಸ್ ಎಂದು ಗುರುತು ಹಚ್ಚಲಾರರು. ಅವರೂ ಒಳ್ಳೆಯ ಕಂಪನಿಯಲ್ಲಿ ದುಡಿಯುತ್ತಿರುವುದರಿಂದ ಇಬ್ಬರು ಮಕ್ಕಳೂ ಮನೆ, ಕಾರು, ಬ್ಯಾಂಕ್ ಬ್ಯಾಲೆನ್ಸ್ ಇತ್ಯಾದಿಗಳೊಂದಿಗೆ 'ವೆಲ್ ಟು ಡು' ಆರ್ಥಿಕ ಪರಿಧಿಯಲ್ಲಿ ಇದ್ದಾರೆ. ಋಗ್ವೇದಿಯವರ ಆರ್ಥಿಕ ಪರಿಸ್ಥಿತಿಯೂ ತುಂಬಾನೇ ಚನ್ನಾಗಿದೆ. ಸ್ವಂತ ಮನೆ, ಕಾರು ಇರುವುದರೊಂದಿಗೆ ಪೆನ್ಷನ್ ಮತ್ತು ಸೇವಿಂಗ್ಸ್ ಮೇಲಿನ ಬಡ್ಡಿ ಸೇರಿ ಆದಾಯ ಲಕ್ಷ ದಾಟುತ್ತದೆ. ಈಗ್ಗೆ ಆರು ತಿಂಗಳ ಹಿಂದೆ ಒಂದು ಸಾರಿ ದೊಡ್ಡ ಮಗ ಅಮೆರಿಕದಿಂದ ಫೋನ್ ಮಾಡಿದಾಗ, ''ಏನಪ್ಪಾ ಅಮೌಂಟ್ ಗಿಮೌಂಟ್ ಏನಾದರೂ ಬೇಕಿತ್ತಾ?'' ಎಂದು ಕೇಳಿದ್ದ. ಪಕ್ಕದಲ್ಲೇ ಇದ್ದ ಅವನ ಹೆಂಡತಿ, ''ಇರೋದು ಸಿಂಗಲ್, ಒನ್ ಲ್ಯಾಕ್ ಅಂಡ್ ಆಡ್ ಬರುತ್ತೆ. ಅವರೆಷ್ಟೇ ಲಕ್ಸುರಿಯಾಗಿ ಖರ್ಚು ಮಾಡಿದ್ರೂ ಮಾಕ್ಸಿಮಮ್ ಫಾರ್ಟಿ ಥೌಸಂಡ್ ದಾಟಲ್ಲ. ಅದೂ ಇಂಡಿಯಾದಲ್ಲಿ ಎಲ್ಲಾ ಚೀಪ್ ಅಲ್ವಾ. ಸುಮ್ನೆ ಯಾಕೆ ಡಾಲರ್ ವೇಸ್ಟ್ ಮಾಡ್ತೀರ. ಜಾಸ್ತಿ ಇದ್ರೆ ನನ್ನ ಕೈಗೆ ಕೊಡಿ, ಯಾವುದಾದರು ಒಳ್ಳೆಯ ಕಂಪನಿಯ ಷೇರ್ ಪರ್ಚೇಸ್ ಮಾಡ್ತೀನಿ. ಮಕ್ಕಳಿಗಾದ್ರೂ ಹೆಲ್ಪ್ ಆಗುತ್ತೆ ಮುಂದಕ್ಕೆ.'' ಎಂದು ಹೇಳುತ್ತಿರುವುದು ಋಗ್ವೇದಿಯವರಿಗೆ ಕೇಳಿಸಿತ್ತು. ''ನನಗ್ಯಾತಕ್ಕೋ ಅಮೌಂಟು, ನನ್ನದೆ ನನಗೆ ಸಾಕಷ್ಟು ಇದೆ. ಅಮೆರಿಕದಲ್ಲಿ ಲೈಫ್ ತುಂಬಾ ಕಾಸ್ಟ್ಲಿ, ನೀನೆ ಬಳಸ್ಕೊ.'' ಎಂದು ಸಮಾಧಾನ ಮಾಡಿದ್ದರು. ಹಾಗಾಗಿ ಋಗ್ವೇದಿ ರಾತ್ರಿ ಎರಡು ಗಂಟೆಗೆ